REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 30 । ಸಂಚಿಕೆ : 15 । ಜುಲೈ 19, 2023 । ಬುಧವಾರ । ಪುಟಗಳು : 8 । ಬೆಲೆ : 2/-

## ಮೈಸೂರಿನ ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ



**ಮೈಸೂರು** : ದಿನಾಂಕ : 09.07.2023ರಂದು ಮೈಸೂರು ನಗರದ ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ "ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕಿನ ಶತಮಾನೋತ್ಸವ ಸಮಾರಂಭದ ಉದ್ಘಾಟನೆಯನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ॥ ಎಚ್.ಸಿ. ಮಹದೇವಪ್ಪ ನೆರವೇರಿಸಿ ಮಾತನಾಡಿ ಸಹಕಾರ ಕ್ಷೇತ್ರ ಎಲ್ಲರನ್ನೂ ಒಳಗೊಳ್ಳಬೇಕು ಕೆಲವೇ ಜನರ ಸ್ವತ್ತಾಗಬಾರದು ಎಂದರು.

3ನೇ ಪುಟಕ್ಕೆ...

## ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರು ಹಾಗೂ B.O.M ಸದಸ್ಯರುಗಳಿಗೆ 25.07.2023 ರಂದು ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ದಿನಾಂಕ : 25ನೇ ಜುಲೈ 2023ರ ಮಂಗಳವಾರರಂದು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ವೃತ್ತಿಪರ ನಿರ್ದೇಶಕರಿಗೆ ಹಾಗೂ B.O.M ಸದಸ್ಯರುಗಳಿಗೆ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆಂಗಲ್ ಹನುಮಂತಯ್ಯ ರಸ್ತೆ, ಡಬಲ್ ರೋಡ್, ಬೆಂಗಳೂರು-560027 ಇಲ್ಲಿ ಏರ್ಪಡಿಸಲಾಗಿರುತ್ತದೆ. ಸದರಿ ವಿಚಾರ ಸಂಕಿರಣದಲ್ಲಿ ಈ ಕೆಳಗೆ ವಿವರಿಸಿದ ವಿಷಯಗಳ ಮೇಲೆ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಸದರಿ ಕಾರ್ಯಕ್ರಮವನ್ನು ದಿನಾಂಕ:25.07.2023ರಂದು ಬೆಳಿಗ್ಗೆ 08.30 ಗಂಟೆಗೆ ಉಪಹಾರ ಹಾಗೂ ನೋಂದಣಿಯೊಂದಿಗೆ ಪ್ರಾರಂಭಿಸಲಾಗುವುದು.

- ಪದಾಧಿಕಾರಿಗಳ ಜವಾಬ್ದಾರಿ ಮತ್ತು ಕರ್ತವ್ಯಗಳು
- ವೃತ್ತಿಪರ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು
- B.O.M ಸದಸ್ಯರ ಜವಾಬ್ದಾರಿ ಮತ್ತು ಕರ್ತವ್ಯಗಳು.
- ಸಾಲ ಮತ್ತು ಮುಂಗಡಗಳು.

ಈ ವಿಚಾರ ಸಂಕಿರಣದಲ್ಲಿ ತಪ್ಪದೇ ಭಾಗವಹಿಸಿ ಇದರ ಸದುಪಯೋಗಪಡೆದುಕೊಳ್ಳಬೇಕೆಂದು ವಿನಂತಿಸಲಾಗಿದೆ. ಹೆಚ್ಚಿನ ವಿವರಕ್ಕಾಗಿ ಶ್ರೀ ಆರ್.ಎಚ್. ಕುಮಾರ (ಮೊ) 9980859556 ಮತ್ತು ಶ್ರೀ ಎನ್. ರಮೇಶ್ (ಮೊ) 9448003167 ಇವರುಗಳನ್ನು ಸಂಪರ್ಕಿಸಬಹುದಾಗಿದೆ.

2 ರೂ.7 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಆದಾಯವಿದ್ದರೆ ಯಾವುದೇ ತೆರಿಗೆ ಇಲ್ಲ
4 ಸರಕಾರಿ ನೌಕರರ ಸಹಕಾರಿ ಬ್ಯಾಂಕ ನಿ., ವಿಜಯಪುರ ಪೋನ್ ಪೇ, ಗೂಗಲ್ ಪೇ, ಇಂಟರ್‌ನೆಟ್ ಬ್ಯಾಂಕಿಂಗ್, ಯು.ಪಿ.ಐ ಮತ್ತು ಇತರೆ ಸೌಲಭ್ಯಗಳ ಉದ್ಘಾಟನೆ
7 ನಿಮ್ಮ ಪ್ರಶ್ನೆ ನಮ್ಮ ಉತ್ತರ

## ಸಂಪಾದಕೀಯ

### ಅತ್ಮೀಯ ಸಹಕಾರಿಗಳೇ...



## ಸೈಬರ್ ಅಪರಾಧಗಳು ಹೆಚ್ಚಾಗದಂತೆ ತಡೆಯಲು ಜನರು ಜಾಗೃತರಾಗಬೇಕಿದೆ

ನಮ್ಮ ದೇಶದಲ್ಲಿ ಡಿಜಿಟಲ್ ಕ್ರಾಂತಿ ಶರವೇಗದಲ್ಲಿ ಬೆಳೆಯುತ್ತಿದೆ ಹಾಗೂ ಅದೇ ವೇಗದಲ್ಲಿ ಸೈಬರ್ ಅಪರಾಧ ಪ್ರಕರಣಗಳೂ ದೇಶದಾದ್ಯಂತ ಹೆಚ್ಚುತ್ತಿವೆ. ಇಂದು 45 ಬಗೆಯ ಸೈಬರ್ ವಂಚನೆ ಪ್ರಕರಣಗಳು ನಡೆಯುತ್ತಿರುವುದನ್ನು ನಮ್ಮ ಪೊಲೀಸ್ ಇಲಾಖೆ ಪತ್ತೆ ಹಚ್ಚಿದೆ. ಈ ರೀತಿಯಾಗಿ ನಿತ್ಯ ಒಂದು ಕೋಟಿ ರೂಪಾಯಿಗೂ ಅಧಿಕ ಮೊತ್ತ ವಂಚನೆಯಾಗುತ್ತಿದೆ ಎಂದು ಪೊಲೀಸ್ ವರದಿಗಳು ತಿಳಿಸಿವೆ.

ಮುಖ್ಯವಾಗಿ ಇಂದು ಎಲ್ಲರೂ ಡಿಜಿಟಲ್ ವೇದಿಕೆ ಬಳಸುವವರೇ ಆಗಿದ್ದಾರೆ. ನಿತ್ಯದ ಎಲ್ಲಾ ಕೆಲಸ ಕಾರ್ಯಗಳಿಗೂ ಕೈಲಿರುವ ಮೊಬೈಲ್ ಈ ತಂತ್ರಜ್ಞಾನದ ಬಳಕೆಗೆ ಸಹಾಯಕವಾಗಿದೆ. ಇದನ್ನು ಅರಿತಿರುವ ವಂಚಕರು ಇತರೆ ವಸ್ತುಗಳ ಮಾರಾಟ ಜಾಲತಾಣ, ಫೇಸ್‌ಬುಕ್ ಹಾಗೂ ವಾಟ್ಸ್‌ಆ್ಯಪ್ ವಿಡಿಯೊ ಕರೆ, ಡೆಬಿಟ್ ಕ್ರೆಡಿಟ್ ಕಾರ್ಡ್ ಸ್ಕಿಮ್ಮಿಂಗ್, ಲಿಂಕ್ ಕಳಿಸುವ ಮೂಲಕ ಒಟಿಪಿ ಪಡೆದು ವಂಚನೆ ಇತ್ಯಾದಿ. ಒಎಲ್‌ಎಕ್ಸ್ ಜಾಲತಾಣ, ಉಡುಗೊರೆ ಆಮಿಷ, ಹೂಡಿಕೆ, ಟ್ರೇಡಿಂಗ್ ವಾಟ್ಸ್‌ಆ್ಯಪ್ ವಂಚನೆ, ವೈವಾಹಿಕ ಜಾಲತಾಣ ವಂಚನೆ, ಎನಿ ಡೆಸ್ಕ್, ಟೀಮ್ ವೀವರ್, ಕ್ವಿಕ್ ಸಪೋರ್ಟ್, ಉದ್ಯೋಗದ ಹೆಸರಿನಲ್ಲಿ, ಸಿಮ್ ಕಾರ್ಡ್ ಬ್ಲಾಕ್, ನಕಲಿ ಖಾತೆ ಸೃಷ್ಟಿಸಿ ವಂಚನೆ... ಹೀಗೆ ನಾನಾ ಸ್ವರೂಪದಲ್ಲಿ ವಂಚನೆ ಪ್ರಕರಣಗಳು ನಡೆಯುತ್ತಿವೆ.

ಇಂದು ನಡೆಯುವ ಅಪರಾಧ ಪ್ರಕರಣಗಳಲ್ಲಿ ಶೇ.5ರಷ್ಟು ಸಾಮಾನ್ಯ ಅಪರಾಧಗಳು ನಡೆದರೆ, ಶೇ.20ರಷ್ಟು ಸೈಬರ್ ಅಪರಾಧಗಳು ನಡೆಯುತ್ತಿರುವುದನ್ನು ದಾಖಲಾದ ಪ್ರಕರಣಗಳೇ ತೋರುತ್ತಿವೆ. ಅದರಲ್ಲಿ ಕೇವಲ ಪೈಕಿ ಶೇ.17ರಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಮಾತ್ರ ಪತ್ತೆ ಹಚ್ಚಲು ಸಾಧ್ಯವಾಗಿರುವುದು ಪರಿಸ್ಥಿತಿಯ ಗಂಭೀರತೆಯನ್ನು ತೋರಿಸುತ್ತಿದೆ.

ಕಳೆದ ವರ್ಷವೊಂದರಲ್ಲೇ ಈ ರೀತಿಯಾಗಿ ರಾಜ್ಯದಲ್ಲಿ ರೂ. 363 ಕೋಟಿಗೂ ಅಧಿಕ ಹಣ ವಂಚನೆಯಾಗಿದೆ. ಅದರಲ್ಲೂ ಡಿಜಿಟಲ್ ಬಲ್ಲ ಶಿಕ್ಷಿತ ಜನರಿರುವ ನಮ್ಮವರು ವಂಚನೆಗೆ ಒಳಗಾಗಿದ್ದರೇ ಇವರನ್ನು ವಂಚನೆ ಮಾಡಿರುವವರು ಅಷ್ಟೇನು ಸುಶಿಕ್ಷಿತರಲ್ಲದ ಕೇವಲ ಡಿಜಿಟಲ್ ತಾಣವನ್ನು ಬಳಸಬಲ್ಲ ಉತ್ತರ ಭಾರತದ ಹಿಂದುಳಿದ ರಾಜ್ಯಗಳಲ್ಲಿ ಇರುವವರಾಗಿದ್ದಾರೆ.

ಸಾಮಾನ್ಯ ಅಪರಾಧ ಪ್ರಕರಣಗಳಿಗಿಂತ ಸೈಬರ್‌ಕ್ರೈಂ ಕೇಸ್‌ಗಳ ತನಿಖೆ ವಿಭಿನ್ನವಾಗಿವೆ. ಶೇ.75ರಷ್ಟು ತನಿಖಾ ಪ್ರಕ್ರಿಯೆ ತಾಂತ್ರಿಕ ನೈಪುಣ್ಯದಿಂದಲೇ ಕೂಡಿರಲಿದೆ. ಆರೋಪಿಗಳು ಬಳಸಿದ ಮೊಬೈಲ್ ನಂಬರ್, ಕಂಪ್ಯೂಟರ್‌ನ ಐಪಿ ವಿಳಾಸ, ಬ್ಯಾಂಕ್ ಖಾತೆಯ ವಿವರಗಳನ್ನು ಸಂಗ್ರಹಿಸಬೇಕು. ಬಹುತೇಕ ಕೇಸ್‌ಗಳಲ್ಲಿ ಈ ಎಲ್ಲಾ ದಾಖಲೆಗಳು ಆರೋಪಿಯಲ್ಲದವರ ಹೆಸರಿನಲ್ಲಿರುತ್ತವೆ. ಹೀಗಾಗಿ, ಪ್ರಕರಣದ ನೈಜ ಆರೋಪಿಯನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯವಾಗಿದೆ. ಈ ಎಲ್ಲ ಕಾರಣಗಳಿಗಾಗಿ ಡಿಜಿಟಲ್ ತಾಣವನ್ನು ಬಳಸುವವರು ಹೆಚ್ಚಿನ ಜಾಗ್ರತೆ ವಹಿಸಬೇಕಿದೆ. ಸೈಬರ್ ಕ್ರೈಮ್‌ಗೆ ಒಳಗಾದ ಕೂಡಲೆ ದೂರು ದಾಖಲಿಸಲು ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್‌ನ ಸಹಾಯ ಸಂಖ್ಯೆ –1930 ಅಥವ ಸಮೀಪದ ಪೊಲೀಸ್ ಸ್ಟೇಶನ್‌ಗೆ ಹೋಗಿ ದೂರು ದಾಖಲಿಸಿ. ಸಾಧ್ಯವಾಗದಿದ್ದರೆ, cybercrime.gov.in ಮೂಲಕ ನಿಮ್ಮ ದೂರನ್ನು ಆನ್‌ಲೈನ್‌ನಲ್ಲೂ ಸಲ್ಲಿಸಬಹುದಾಗಿದೆ ಎಂದು ನನಗೆ ತಿಳಿದಿರುವ ಮಾಹಿತಿಯನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ.

▸▸ ಎಚ್.ಕೆ. ಪಾಟೀಲ್

## ರೂ.7 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಆದಾಯವಿದ್ರೆ ಯಾವುದೇ ತೆರಿಗೆ ಇಲ್ಲ

2023–24ರ ಬಜೆಟ್‌ನಲ್ಲಿ ಕೇಂದ್ರದ ಮೋದಿ ಸರ್ಕಾರವು ಹೊಸ ತೆರಿಗೆ ಪದ್ಧತಿಯನ್ನು ಆಕರ್ಷಕವಾಗಿಸಲು ಹಲವು ಬದಲಾವಣೆಗಳನ್ನು ಮಾಡಿದೆ. ಅಂದಿನಿಂದ, ಈ ತೆರಿಗೆ ಪದ್ಧತಿಯಲ್ಲಿ ಅನೇಕ ಜನರ ಆಸಕ್ತಿ ಹೆಚ್ಚಾಗಿದೆ. ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಮತ್ತೊಮ್ಮೆ ಹೊಸ ತೆರಿಗೆ ಪದ್ಧತಿಯನ್ನು ಶ್ಲಾಘಿಸಿದ್ದಾರೆ. ಹೊಸ ತೆರಿಗೆ ಪದ್ಧತಿಯು ಮಧ್ಯಮ ವರ್ಗದ ಜನರಿಗೆ ಗರಿಷ್ಠ ಪರಿಹಾರ ಮತ್ತು ಪ್ರಯೋಜನಗಳನ್ನು ನೀಡಿದೆ ಎಂದು ಹಣಕಾಸು ಸಚಿವರು ಹೇಳಿದರು. ಈ ವರ್ಗದ ಜನರು ವಾರ್ಷಿಕ 7.27 ಲಕ್ಷ ರೂ. ಗಳ ಆದಾಯದ ಮೇಲೆ ತೆರಿಗೆ ವಿನಾಯಿತಿ ಪಡೆಯುತ್ತಿದ್ದಾರೆ ಎಂದು ಹೇಳಿದರು.

ಈ ನಿರ್ಧಾರದ ನಂತರ, ದೇಶದ ಅನೇಕ ಜನರು ಇದನ್ನು ನಂಬಲಿಲ್ಲ. ಒಬ್ಬ ವ್ಯಕ್ತಿಯ ಆದಾಯ 7 ಲಕ್ಷಕ್ಕಿಂತ ಹೆಚ್ಚಿದ್ದರೆ ತೆರಿಗೆ ಕಟ್ಟಬೇಕೇ ಎಂಬ ಪ್ರಶ್ನೆ ಕೆಲವರ ಮನದಲ್ಲಿ ಮೂಡಿತ್ತು. ಅಂತಹ ಪರಿಸ್ಥಿತಿಯಲ್ಲಿ, ಈ ವಿಷಯವನ್ನು ಪರಿಗಣಿಸಲು ನಾವು ನಿರಂತರವಾಗಿ ಮಾತನಾಡಿದ್ದೇವೆ. ಇದಾದ ನಂತರ, 7 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಆದಾಯವಿದ್ದರೆ ಯಾವುದೇ ತೆರಿಗೆ ಪಾವತಿಸಬೇಕಾಗಿಲ್ಲ ಎಂದು ನಿರ್ಧರಿಸಲಾಯಿತು. ಉದಾಹರಣೆಗೆ, ವಾರ್ಷಿಕವಾಗಿ 7.27 ಲಕ್ಷ ಗಳಿಸುವ ವ್ಯಕ್ತಿ ಯಾವುದೇ ತೆರಿಗೆಯನ್ನು ಪಾವತಿಸಬೇಕಾಗಿಲ್ಲ.

**50,000 ಆದಾಯದ ಮೇಲೆ ಸ್ಟ್ಯಾಂಡರ್ಡ್ ಡಿಡಕ್ಷನ್ ಲಭ್ಯವಿದೆ :** ಹೊಸ ತೆರಿಗೆ ಪದ್ಧತಿಯಲ್ಲಿ ಹಿಂದಿನ ಜನರು ಸ್ಟ್ಯಾಂಡರ್ಡ್ ಡಿಡಕ್ಷನ್‌ನ ಪ್ರಯೋಜನವನ್ನು ಪಡೆಯುತ್ತಿಲ್ಲ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು. ಈ ಬಗ್ಗೆ ಅನೇಕ ದೂರುಗಳು ಬರುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಜನರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ರೂ.50,000 ವರೆಗೆ ಸ್ಟ್ಯಾಂಡರ್ಡ್ ಡಿಡಕ್ಷನ್‌ಗೂ ಅವಕಾಶ ಕಲ್ಪಿಸಿದ್ದೇವೆ.

**ಎಂಎಸ್‌ಎಂಇಗಳ ಬಜೆಟ್ ಅನ್ನು ಹಲವು ಪಟ್ಟು ಹೆಚ್ಚಿಸಲಾಗಿದೆ :** ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಶ್ಲಾಘಿಸಿದ ಹಣಕಾಸು ಸಚಿವರು, ಕಳೆದ 9 ವರ್ಷಗಳಲ್ಲಿ ಅದರ ಬಜೆಟ್ 7 ಪಟ್ಟು ಹೆಚ್ಚಾಗಿದೆ ಎಂದು ಹೇಳಿದರು. 2013–14ನೇ ಹಣಕಾಸು ವರ್ಷದಲ್ಲಿ ಈ ಬಜೆಟ್ 3,185 ಕೋಟಿ ರೂ. ಗಳಾಗಿದ್ದು, ಇದೀಗ 2023–24ರಲ್ಲಿ 22,138 ಕೋಟಿ ರೂ.ಗೆ ಏರಿಕೆಯಾಗಿದೆ. ದೇಶದ ಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರ ಎಷ್ಟು ಬದ್ಧವಾಗಿದೆ ಎಂಬುದನ್ನು ಇದು ತೋರಿಸುತ್ತದೆ. ಇದರೊಂದಿಗೆ, ಸಾರ್ವಜನಿಕ ಸಂಗ್ರಹಣೆ ನೀತಿಯಡಿಯಲ್ಲಿ, ಸರ್ಕಾರವು ಎಂಎಸ್‌ಎಂಇಗಳಿಂದ ಒಟ್ಟು ಖರೀದಿಯಲ್ಲಿ 33 ಪ್ರತಿಶತವನ್ನು ಮಾಡುತ್ತಿದೆ ಎಂದು ಅವರು ಹೇಳಿದರು.

... 1ನೇ ಪುಟದಿಂದ




"ಅಸಮಾನತೆ ತೊಡೆದು ಸಮ ಸಮಾಜ ನಿರ್ಮಾಣದತ್ತ ಹೆಜ್ಜೆ ಇಡಬೇಕು. ಎಲ್ಲರಿಗೂ ಅವಕಾಶ ಸಿಗಬೇಕು. ಆಗ ಮಾತ್ರ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಈಡೇರಿಸಲು ಸಾಧ್ಯ ಎಂದರು.

ರಾಜ್ಯವು ಸಹಕಾರ ಚಳುವಳಿಯ ತೊಟ್ಟಿಲಾಗಿದೆ. ಸಹಕಾರ ತತ್ವದಡಿ ಆರ್ಥಿಕ ಸ್ವಾವಲಂಬನೆ ಪಡೆಯಬೇಕು ಎಂಬುದು ಸಂವಿಧಾನದ ಆಶಯವಾಗಿದೆ. ಒಬ್ಬರಿಗೊಬ್ಬರು ಸಹಕಾರದಿಂದ ಅಭಿವೃದ್ಧಿಯನ್ನು ಸಾಧಿಸಬೇಕು ಎಂಬುದು ಗಾಂಧಿ, ಅಂಬೇಡ್ಕರ್ ಮೊದಲಾದವರ ಪ್ರತಿಪಾದನೆಯಾಗಿತ್ತು ಎಂದು ಸ್ಮರಿಸಿದರು.

1930ರಲ್ಲಿ ಜಗತ್ತು ಆರ್ಥಿಕ ಸಂಕಷ್ಟಕ್ಕೀಡಾದಾಗ ರೂಪಾಯಿ ಸಮಸ್ಯೆ ಕುರಿತು ಡಾ. ಬಿ.ಆರ್. ಅಂಬೇಡ್ಕರ್ ಪ್ರಬಂಧ ರಚಿಸಿದ್ದರು. ಅದರ ಪ್ರೇರಣೆಯಿಂದಲೇ ಭಾರತೀಯ ರಿಸರ್ವ್ ಬ್ಯಾಂಕ್ 1935ರ ಏ.1 ರಂದು ಸ್ಥಾಪನೆಯಾಯಿತು. ಆರ್‌ಬಿಐ ಅಡಿಯಲ್ಲಿಯೇ ಸಹಕಾರ ಬ್ಯಾಂಕುಗಳು ಸ್ಥಾಪನೆಯಾಗಿವೆ ಎಂದರು.

ಶತಮಾನೋತ್ಸವ ಶಿಲಾನ್ಯಾಸ ನೆರವೇರಿಸಿದ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣನವರು ಮಾತನಾಡಿ ಠೇವಣಿ ಹೆಚ್ಚಿದ್ದರೂ ಕೆಲವು ಸಂಸ್ಥೆಗಳಲ್ಲಿ ಸಾಲವನ್ನು ನೀಡುತ್ತಿಲ್ಲ. ಸಂಸ್ಥೆಯು ಹೆಚ್ಚು ಸಾಲ ನೀಡಿದಷ್ಟೂ ಆರ್ಥಿಕ ಸ್ವಾವಲಂಬನೆ ಹಾಗೂ ಸದಸ್ಯರಿಗೆ ಲಾಭಾಂಶ ನೀಡಲು ಸಾಧ್ಯ. ಹೀಗಾಗಿ, ಸಾಲ ನೀಡುವಾಗ ತಾರತಮ್ಯ ಮಾಡದೇ ನೀಡಬೇಕು ಎಂದು ಒತ್ತಾಯಿಸಿದರು. ಸಹಕಾರ ಸಂಸ್ಥೆಗಳು ಸದಸ್ಯರ ಆಸ್ತಿಯೇ ಹೊರತೂ ಸರ್ಕಾರದ ಸ್ವತ್ತಲ್ಲ. ಸುಗುಮವಾಗಿ ಕಾರ್ಯಚಟುವಟಿಕೆಗಳು ನಡೆಯುತ್ತಿವೆಯೇ ಎಂಬುದನ್ನು ನೋಡುವುದಷ್ಟೇ ಸರ್ಕಾರದ ಕೆಲಸವಾಗಿದೆ. ಕೆಲವು ಸಂಸ್ಥೆಗಳಲ್ಲಿ ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದಾಗಿ ಭ್ರಷ್ಟಾಚಾರ ನಡೆಯುತ್ತಿದೆ, ಆ ವೇಳೆ ಮಧ್ಯಪ್ರವೇಶ ಅನಿವಾರ್ಯ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಶ್ರೀ ಟಿ.ಎಸ್. ಶ್ರೀವತ್ಸ, ವಿಧಾನಪರಿಷತ್ ಸದಸ್ಯರುಗಳಾದ ಶ್ರೀ ಎಚ್. ವಿಶ್ವನಾಥ್, ಶ್ರೀ ಮರಿತಿಬ್ಬೇಗೌಡ, ಡಾ. ಡಿ. ತಿಮ್ಮಯ್ಯ, ಮೈಸೂರು ಮೇಯರ್ ಶ್ರೀ ಕೆ. ಶಿವಕುಮಾರ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷ ಶ್ರೀ ಎಚ್.ವಿ. ರಾಜೀವ್, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್. ಶ್ರೀನಿವಾಸ, ಉಪಾಧ್ಯಕ್ಷ ಶ್ರೀ ಆರ್. ಅನಂತರಾಮು, ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರಾದ ಡಾ. ಕೆ.ವಿ. ಲಕ್ಷ್ಮೀದೇವಿ, ಡಾ. ಸುಜಾತ ಎಸ್. ರಾವ್, ಶ್ರೀಮತಿ ಎಂ.ಎ. ಹೇಮಲತ, ಶ್ರೀ ಟಿ.ಎಸ್. ರವಿಶಂಕರ್, ಶ್ರೀ ಎಸ್. ಎನ್. ಜಗದೀಶ್, ಶ್ರೀ ಎಂ.ಎಸ್. ರಾಜಾರಾಂ, ವ್ಯವಸ್ಥಾಪಕ ಶ್ರೀ ಟಿ.ವಿ. ಮಹೇಶ ಮತ್ತಿತರರು ಉಪಸ್ಥಿತರಿದ್ದರು.

## ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕರನ್ನು ಹೊರತುಪಡಿಸಿ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಏರ್ಪಡಿಸಿರುವ ಕುರಿತು

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme)ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ ತರಬೇತಿಯನ್ನು ದಿನಾಂಕ : 31.07.2023 ರಿಂದ ದಿನಾಂಕ : 04.08.2023ರವರೆಗೆ ಬೆಳಿಗ್ಗೆ 09.00 ಗಂಟೆಯಿಂದ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ.

ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ. ಈ ತರಬೇತಿ ಶಿಬಿರದ ಶುಲ್ಕದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ದಿನಾಂಕ: 28.06.2023ರಂದು ಮಹಾಮಂಡಳವು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಬರೆದಿರುವ ಪತ್ರವನ್ನು ತಾವು ತಮ್ಮ ಬ್ಯಾಂಕಿನ ಇ–ಮೇಲ್‌ನಲ್ಲಿ ನೋಡಬಹುದು. ಪ್ರತಿನಿಧಿ ಶುಲ್ಕವನ್ನು ಚೆಕ್ / ಡಿ.ಡಿ ಅಥವಾ ಎನ್‌ಇಎಫ್‌ಟಿ ಮುಖಾಂತರ ದಿನಾಂಕ : 30.06.2023 ರೊಳಗಾಗಿ ಪಾವತಿಸಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಅಧಿಕಾರಿಗಳಾದ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಹೆಚ್.ಸಿ. ಶ್ರೀನಿವಾಸ್ (9110642779) ರವರುಗಳನ್ನು ಸಂಪರ್ಕಿಸಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

## ಸರಕಾರಿ ನೌಕರರ ಸಹಕಾರಿ ಬ್ಯಾಂಕ ನಿ., ವಿಜಯಪುರ

### ಪೋನ್ ಪೇ, ಗೂಗಲ್ ಪೇ, ಇಂಟರ್‌ನೆಟ್ ಬ್ಯಾಂಕಿಂಗ್, ಯು.ಪಿ.ಐ ಮತ್ತು ಇತರೆ ಸೌಲಭ್ಯಗಳ ಉದ್ಘಾಟನೆ




**ವಿಜಯಪುರ :** ದಿನಾಂಕ : 23.06.2023ರಂದು ಸರಕಾರಿ ನೌಕರರ ಸಹಕಾರಿ ಬ್ಯಾಂಕಿನ ಪೋನ ಪೇ, ಗೂಗಲ ಪೇ, ಇಂಟರನೆಟ್ ಬ್ಯಾಂಕಿಂಗ್, ಯು.ಪಿ.ಆಯ್ ಮತ್ತು ಇತರೆ ಸೌಲಭ್ಯಗಳ ಉದ್ಘಾಟನಾ ಕಾರ್ಯಕ್ರಮವನ್ನು ಮಾನ್ಯ ಶ್ರೀ ಎಂ.ಬಿ. ಪಾಟೀಲ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ವಿಜಯಪುರ ಜಿಲ್ಲೆ ಇವರು ನೆರವೇರಿಸಿ ಶತಮಾನ ಕಂಡ ಸರಕಾರಿ ನೌಕರರ ಸಹಕಾರಿ ಬ್ಯಾಂಕ ಕಾರ್ಯ ಶ್ಲಾಘನೀಯವಾಗಿದ್ದು, ಆರ್ಥಿಕತೆ ಬೆಳೆಯುವಲ್ಲಿ ಬಹುಮುಖ್ಯ ಪಾತ್ರ ವಹಿಸಿರುವುದು ಜಿಲ್ಲೆಗೆ ಹೆಮ್ಮೆ ತಂದಿದೆ ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ವಿಠ್ಠಲ ಕಟಕದೊಂಡ, ಅಶೋಕ ಮನಗೂಳಿ, ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಹನಮಂತ ನಿರಾಣಿ ಬ್ಯಾಂಕಿನ ಅಧ್ಯಕ್ಷ ಹನಮಂತ ಕೊಣದಿ, ಉಪಾಧ್ಯಕ್ಷ ಅಲ್ಲಾಭಕ್ಷ ವಾಲಿಕಾರ, ನಿರ್ದೇಶಕರಾದ ಅರವಿಂದ ಹೂಗಾರ, ಈರಪ್ಪ ತೇಲಿ, ಭೀಮನಗೌಡ ಬಿರಾದಾರ, ಅರ್ಜುನ ಲಮಾಣಿ, ಸುರೇಶ ಶಡಶ್ಯಾಳ, ಜಯಶ್ರೀ ಬೆಣ್ಣಿ, ಸದಾಶಿವ ದಳವಾಯಿ, ಆನಂದಗೌಡ ಬಿರಾದಾರ, ಪ್ರಶಾಂತ ಚನಗೊಂಡ, ಉಮೇಶ ಗುಡ್ನಾಳ, ಅಶೋಕ ಚನಬಸಗೋಳ, ನೀಲಾ ಇಂಗಳೆ, ಚಂದ್ರಶೇಖರ ಜತ್ತಿ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಎಂ.ವಿ. ಪರ್ವತಿ ಹಾಗೂ ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಸಾಲದ ಮೇಲಿನ ಬಡ್ಡಿ ದರ ಹೆಚ್ಚಿಸಿದ ಎಸ್‌ಬಿಐ : ಗ್ರಾಹಕರಿಗೆ ಇಎಂಐ ಹೊರೆ ಹೆಚ್ಚಲಿದೆ

ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಕೋಟಿಗಟ್ಟಲೆ ಗ್ರಾಹಕರಿಗೆ ಮತ್ತೊಮ್ಮೆ ಶಾಕ್ ನೀಡಿದೆ. ಬ್ಯಾಂಕ್ ತನ್ನ ಕನಿಷ್ಠ ವೆಚ್ಚದ ಸಾಲದ ದರವನ್ನು 5 ಬೇಸಿಸ್ ಪಾಯಿಂಟ್‌ಗಳಷ್ಟು ಹೆಚ್ಚಿಸಿದೆ. ಬ್ಯಾಂಕ್ ಹೊಸ ದರಗಳನ್ನು 15 ಜುಲೈ 2023 ರಿಂದ ಜಾರಿಗೆ ತಂದಿದೆ. ಬ್ಯಾಂಕ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾದ ಮಾಹಿತಿಯ ಪ್ರಕಾರ, ವಿವಿಧ ಅವಧಿಗಳಿಗೆ MCLR ಶೇಕಡಾ 8 ರಿಂದ 8.75 ರವರೆಗೆ ಇರುತ್ತದೆ. ಈ ಹೆಚ್ಚಳದ ನಂತರ, ಗೃಹ ಸಾಲ, ವಾಹನ ಸಾಲ, ಶಿಕ್ಷಣ ಸಾಲ, ವೈಯಕ್ತಿಕ ಸಾಲ ಇತ್ಯಾದಿಗಳ ಇಎಂಐ ಹೊರೆ ಬ್ಯಾಂಕಿನ ಗ್ರಾಹಕರ ಮೇಲೆ ಹೆಚ್ಚಾಗುತ್ತದೆ.


**ವಿವಿಧ ಅವಧಿಗಳಲ್ಲಿ ಇಎಂಐ ಎಷ್ಟು :** ಇದಕ್ಕೂ ಮೊದಲು, ದೇಶದ ಅತಿದೊಡ್ಡ ಬ್ಯಾಂಕ್ ತನ್ನ ಮಾನದಂಡದ ಅವಿಭಾಜ್ಯ ಸಾಲ ದರಗಳನ್ನು (BPLR) ಮಾರ್ಚ್ 15, 2023 ರಂದು 70 ಬೇಸಿಸ್ ಪಾಯಿಂಟ್‌ಗಳಿಂದ ಹೆಚ್ಚಿಸಿದೆ. ಎಸ್‌ಬಿಐನ ಎಂಸಿಎಲ್‌ಆರ್ ಶೇ.7.95ರಿಂದ ಶೇ.8.00ಕ್ಕೆ ಏರಿಕೆಯಾಗಿದೆ. ಅದೇ ಸಮಯದಲ್ಲಿ, ಒಂದು ತಿಂಗಳ ಎಂಸಿಎಲ್‌ಆರ್ ಶೇಕಡಾ 8.10 ರಿಂದ ಶೇಕಡಾ 8.15ಕ್ಕೆ ಏರಿದೆ. ಮೂರು ತಿಂಗಳ ಎಂಸಿಎಲ್‌ಆರ್ ಶೇಕಡಾ 8.10 ರಿಂದ ಶೇಕಡಾ 8.15ಕ್ಕೆ ಏರಿದ್ದರೆ, 6 ತಿಂಗಳ ಎಂಸಿಎಲ್‌ಆರ್ ಶೇಕಡಾ 8.40 ರಿಂದ ಶೇಕಡಾ 8.45ಕ್ಕೆ ಏರಿದೆ. ಒಂದು ವರ್ಷದ ಎಂಸಿಎಲ್‌ಆರ್ ಶೇ.8.50ರಿಂದ ಶೇ.8.55ಕ್ಕೆ, ಎರಡು ವರ್ಷದ ಎಂಸಿಎಲ್‌ಆರ್ ಶೇ.8.60 ರಿಂದ ಶೇ.8.65ಕ್ಕೆ ಮತ್ತು ಮೂರು ವರ್ಷದ ಎಂಸಿಎಲ್‌ಆರ್ ಶೇ.8.70 ರಿಂದ ಶೇ.8.75ಕ್ಕೆ ಏರಿಕೆಯಾಗಿದೆ.

**ರೆಪೋ ದರ ಸ್ಥಿರವಾದ ನಂತರವೂ ಬಡ್ಡಿ ದರ ಹೆಚ್ಚಾಗುತ್ತಿದೆ :** ಹಣದುಬ್ಬರವನ್ನು ನಿಯಂತ್ರಿಸಿದ ನಂತರ ರಿಸರ್ವ್ ಬ್ಯಾಂಕ್ ದೀರ್ಘಕಾಲದವರೆಗೆ ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ ಎಂಬುದು ಗಮನಾರ್ಹ. 6.50 ರಷ್ಟು ಸ್ಥಿರವಾಗಿದೆ. ಮತ್ತೊಂದೆಡೆ, ಮೇ 2022 ರಿಂದ ಇಲ್ಲಿಯವರೆಗೆ, ಕೇಂದ್ರ ಬ್ಯಾಂಕ್ ರೆಪೊ ದರವನ್ನು ಒಟ್ಟು 2.50 ಪ್ರತಿಶತದಷ್ಟು ಹೆಚ್ಚಿಸಿದೆ, ಆದರೆ ಜೂನ್ 2023 ರಲ್ಲಿ ಹಣದುಬ್ಬರವನ್ನು ನಿಯಂತ್ರಿಸಿದ ನಂತರ, ರಿಸರ್ವ್ ಬ್ಯಾಂಕ್ ರೆಪೊ ದರದಲ್ಲಿ ಯಾವುದೇ ಬದಲಾವಣೆಯನ್ನು ಮಾಡಿಲ್ಲ. ಈ ನಿರ್ಧಾರದ ನಂತರವೂ ಬ್ಯಾಂಕುಗಳು ತಮ್ಮ ಬಡ್ಡಿದರಗಳನ್ನು ನಿರಂತರವಾಗಿ ಹೆಚ್ಚಿಸುತ್ತಿವೆ. ಇದರಿಂದ ಗ್ರಾಹಕರು ದುಬಾರಿ ಬಡ್ಡಿ ತೆರಬೇಕಾಗಿದೆ.

**ಎಚ್‌ಡಿಎಫ್‌ಸಿ ಬಡ್ಡಿದರವೂ ಸಹ ಬಡ್ಡಿ ದರ ಏರಿಕೆ ಮಾಡಿದೆ :** ಎಸ್‌ಬಿಐಗಿಂತ ಮೊದಲು, ದೇಶದ ಅತಿದೊಡ್ಡ ಖಾಸಗಿ ವಲಯದ ಬ್ಯಾಂಕ್ ಎಚ್‌ಡಿಎಫ್‌ಸಿ ಬ್ಯಾಂಕ್ ಕೂಡ ತನ್ನ ಬಡ್ಡಿದರಗಳನ್ನು ಹೆಚ್ಚಿಸಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ಎಂಸಿಎಲ್‌ಆರ್ ಅನ್ನು ಶೇಕಡಾ 15 ರಷ್ಟು ಹೆಚ್ಚಿಸಿದೆ. ಕೆಲವು ಆಯ್ದ ಅವಧಿಯ ಸಾಲಗಳ ಮೇಲೆ ಈ ಹೆಚ್ಚಳ ಮಾಡಲಾಗಿದೆ. ಹೊಸ ದರಗಳು ಜುಲೈ 7, 2023 ರಿಂದ ಜಾರಿಗೆ ಬಂದಿವೆ.

# ಬ್ಯಾಂಕಿಂಗ್ ವಲಯಕ್ಕೆ ಆರ್‌ಬಿಐ ಟಾನಿಕ್..!

**ಕೆಲವು ಬ್ಯಾಂಕುಗಳು ಪರಸ್ಪರ ಪ್ರಬಲ ಪೈಪೋಟಿ ನೀಡುವ ಭರದಲ್ಲಿ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುತ್ತಿವೆ. ಕ್ರೆಡಿಟ್ ಕಾರ್ಡ್ ಹಾಗೂ ಸಣ್ಣ ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ ಬ್ಯಾಂಕುಗಳು ಗ್ರಾಹಕರನ್ನು ಸೆಳೆಯಲು ಒಮ್ಮೊಮ್ಮೆ ಹಲವು ಆಮಿಷಗಳೊಂದಿಗೆ ಮುನ್ನುಗ್ಗುತ್ತಿವೆ. ಇದು ಅತ್ಯಂತ ಅಪಾಯಕಾರಿ ಎಂದು ಆರ್‌ಬಿಐ ಅಭಿಪ್ರಾಯಪಟ್ಟಿದೆ. ಪ್ರಸ್ತುತ ಅಭದ್ರ ವೈಯಕ್ತಿಕ ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಮೇಲಿನ ರಿಸ್ಕ್‌ವೈಟ್ ಪ್ರಮಾಣ ಅನುಕ್ರಮವಾಗಿ ಶೇ.100 ಹಾಗೂ ಶೇ.125ರಷ್ಟಿದೆ. ಆರ್‌ಬಿಐ ಅಂಕಿ ಅಂಶಗಳ ಪ್ರಕಾರ ಅಭದ್ರ ವೈಯಕ್ತಿಕ ಸಾಲದ ಪ್ರಮಾಣ ಎ.21, 2023ರ ವೇಳೆಗೆ ಶೇ.24ರಷ್ಟು ವೃದ್ಧಿಯಾಗಿದೆ.**




ದೇಶೀಯ ಬ್ಯಾಂಕಿಂಗ್ ವಲಯವು ಯಾವುದೇ ಸ್ವರೂಪದ ಆರ್ಥಿಕ ಆಘಾತ ತಾಳಿಕೊಳ್ಳಬಲ್ಲಷ್ಟು ಸಮರ್ಥವಾಗಿದ್ದು, ಒಟ್ಟು ಎನ್‌ಪಿಎ ಪ್ರಮಾಣ ಹತ್ತು ವರ್ಷದಲ್ಲೇ ಅತ್ಯಂತ ಕಡಿಮೆ ಎನ್ನಲಾದ ಶೇ.3.9ಕ್ಕೆ ಇಳಿಕೆಯಾಗಿದೆ ಎಂದು ರಿಸರ್ವ್ ಬ್ಯಾಂಕಿನ ಆರ್ಥಿಕ ಸ್ಥಿರತೆ ವರದಿಯು ತಿಳಿಸಿದೆ.

ಒಂದು ವೇಳೆ ಜಾಗತಿಕ ಆರ್ಥಿಕ ಹಿಂಜರಿತದ ಬಿಸಿ ಭಾರತಕ್ಕೆ ತಟ್ಟಿದರೆ ಬ್ಯಾಂಕಿಂಗ್ ಕ್ಷೇತ್ರವು ಅದನ್ನು ಎದುರಿಸಲು ಸಾಕಷ್ಟು ಪ್ರಮಾಣದ ಬಂಡವಾಳದೊಂದಿಗೆ ಸುಸಜ್ಜಿತವಾಗಿದೆ. ಲಿಕ್ವಿಡಿಟಿ ಪ್ರಮಾಣವೂ ತೃಪ್ತಿಕರವಾಗಿದೆ. ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳ ಬಂಡವಾಳ ಮತ್ತು ರಿಸ್ಕ್ ವೈಟೆಡ್ ಅಸೆಟ್ ಅನುಪಾತ ಕೂಡ ಶೇ.17.1ರಷ್ಟು ವೃದ್ಧಿಯಾಗಿದೆ. ನಿವ್ವಳ ಬಡ್ಡಿ ಆದಾಯ ವೃದ್ಧಿ ಹಾಗೂ ಎನ್‌ಪಿಎ (ಅನುತ್ಪಾದಕ ಆಸ್ತಿ ಅಥವಾ ವಸೂಲಾಗದ ಸಾಲ)ಗೆ ಪ್ರಾವಿಜನ್ ಮಾಡುವ ಮೀಸಲು ನಿಧಿಯ ಪ್ರಮಾಣ ತಗ್ಗಿದ ಹಿನ್ನೆಲೆಯಲ್ಲಿ 2022-23ನೇ ಸಾಲಿನಲ್ಲಿ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳ ಲಾಭ ಶೇ.38.4ರಷ್ಟು ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ದೇಶೀಯ ಬ್ಯಾಂಕಿಂಗ್ ವಲಯವು ಅಮೆರಿಕ ಮತ್ತು ಐರೋಪ್ಯ ಒಕ್ಕೂಟದ ಬ್ಯಾಂಕಿಂಗ್ ವಲಯಕ್ಕಿಂತ ಬಲಿಷ್ಠವಾಗಿದ್ದು, ಸುರಕ್ಷಿತವಾಗಿದೆ ಎಂದು ಆಹ್ಲಾದಕರವಾದ ಮುನ್ಸೂಚನೆ ನೀಡಿದೆ.

ಆದರೆ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ರಿಸರ್ವ್ ಬ್ಯಾಂಕ್‌ನ ತೀವ್ರ ನಿಗಾ ವಹಿಸಬೇಕಿದೆ. ಅದೇನೆಂದರೆ ಸಾಲ ಬೆಳವಣಿಗೆಯು ಬ್ಯಾಂಕುಗಳ ಆರೋಗ್ಯಕ್ಕೆ ಮಾರಕವಾಗದಂತೆ ನೋಡಿಕೊಳ್ಳಬೇಕಿದೆ. ಉದ್ಯಮದ ಸಾಲ ಎತ್ತುವಳಿ ಮಂದಗತಿಯಲ್ಲಿದ್ದು, ಸಣ್ಣ ಸಾಲವು ಒಟ್ಟು ಸಾಲದ ಒಂದು ಮೂರಾಂಶದಷ್ಟಿದೆ. ಬಹಳಷ್ಟು ಸಣ್ಣ ಸಾಲಗಳು ಸಕಾಲದಲ್ಲಿ ಸರಿಯಾಗಿ ಮರುಪಾವತಿಯಾಗುತ್ತಿಲ್ಲ. ಇನ್ನು ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಕ್ರೆಡಿಟ್ ಕಾರ್ಡ್ ಸಾಲದ ಜಿಎನ್‌ಪಿಎ ಅನುಪಾತ ಶೇ.18ಕ್ಕೆ ಹಾಗೂ ಶೈಕ್ಷಣಿಕ ಸಾಲದ ಜಿಎನ್‌ಪಿಎ ಅನುಪಾತ ಶೇ.5.8ಕ್ಕೆ ಏರಿಕೆಯಾಗಿದೆ. ಇದನ್ನು ಸೂಕ್ತವಾಗಿ ನಿಯಂತ್ರಿಸದಿದ್ದರೆ ಮುಂದೆ ದೊಡ್ಡ ಸಮಸ್ಯೆಯಾದೀತು ಎಂಬುದು ತಜ್ಞರ ಎಚ್ಚರಿಕೆ. ಇನ್ನು ಎಂಎಸ್‌ಎಂಇ ವಲಯಕ್ಕೆ ನೀಡಿದ ಸಾಲಕ್ಕೆ ಸಂಬಂಧಿಸಿದ ಶೇ.18.8ರಷ್ಟು ಖಾತೆಗಳು ಎನ್‌ಪಿಎಗಳಾಗಿ ಪರಿವರ್ತನೆಯಾಗಿವೆ. ಇದರ ಮೇಲೂ ಸಮರ್ಪಕವಾದ ಮೇಲ್ವಿಚಾರಣೆಯಾಗಬೇಕು ಎಂದು ಸಲಹೆ ನೀಡುತ್ತಾರೆ.

ಕೆಲವು ಬ್ಯಾಂಕುಗಳು ಪರಸ್ಪರ ಪ್ರಬಲ ಪೈಪೋಟಿ ನೀಡುವ ಭರದಲ್ಲಿ ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುತ್ತಿವೆ. ಕ್ರೆಡಿಟ್ ಕಾರ್ಡ್ ಹಾಗೂ ಸಣ್ಣ ಸಾಲ ಮಂಜೂರಾತಿಗೆ ಸಂಬಂಧಿಸಿದಂತೆ ಬ್ಯಾಂಕುಗಳು ಗ್ರಾಹಕರನ್ನು ಸೆಳೆಯಲು ಒಮ್ಮೊಮ್ಮೆ ಹಲವು ಆಮಿಷಗಳೊಂದಿಗೆ ಮುನ್ನುಗ್ಗುತ್ತಿವೆ. ಇದು ಅತ್ಯಂತ ಅಪಾಯಕಾರಿ ಎಂದು ಆರ್‌ಬಿಐ ಅಭಿಪ್ರಾಯಪಟ್ಟಿದೆ. ಪ್ರಸ್ತುತ ಅಭದ್ರ ವೈಯಕ್ತಿಕ ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಮೇಲಿನ ರಿಸ್ಕ್‌ವೈಟ್ ಪ್ರಮಾಣ ಅನುಕ್ರಮವಾಗಿ ಶೇ.100 ಹಾಗೂ ಶೇ.125ರಷ್ಟಿದೆ. ಆರ್‌ಬಿಐ ಅಂಕಿ ಅಂಶಗಳ ಪ್ರಕಾರ ಅಭದ್ರ ವೈಯಕ್ತಿಕ ಸಾಲದ ಪ್ರಮಾಣ ಎ.21, 2023ರ ವೇಳೆಗೆ ಶೇ.24ರಷ್ಟು ವೃದ್ಧಿಯಾಗಿದೆ. ಎ.22, 2022ರಲ್ಲಿ ಇದು ಶೇ.18.2ರಷ್ಟಿತ್ತು. ಅದರಂತೆ ಎ.21, 2023ರ ವೇಳೆಗೆ ಕ್ರೆಡಿಟ್ ಕಾರ್ಡ್ ಮೇಲಿನ ಹೆಚ್ಚುವರಿ ಸಾಲ ಶೇ.29.7ರಷ್ಟು ಜಾಸ್ತಿಯಾಗಿದೆ. ಎ.22, 2023ರಲ್ಲಿ ಇದು ಶೇ.20.1ರಷ್ಟಿತ್ತು ಎಂದು ಹೇಳಲಾಗಿದೆ.

ಒಂದು ವೇಳೆ ಇದು ಎನ್‌ಪಿಎ ಆದರೆ ಬ್ಯಾಂಕುಗಳಿಗೆ ಶೇ.100ರಷ್ಟು ನಷ್ಟವಾಗುವ ಸಾಧ್ಯತೆ ಇದೆ. ಏಕೆಂದರೆ ಈ ಎನ್‌ಪಿಎ ಸರಿದೂಗಿಸಲು ಮಾಡುವ ಪ್ರಾವಿಜನಿಂಗ್ ಪ್ರಮಾಣ ಹೆಚ್ಚಾಗಲಿದ್ದು, ಬ್ಯಾಂಕುಗಳ ಲಾಭದ ಮೇಲೆ ಪರಿಣಾಮ ಬೀರಲಿದೆ. ಜೊತೆಗೆ ಇದಕ್ಕಾಗಿ ಜಾಸ್ತಿ ಬಂಡವಾಳವನ್ನು ಬ್ಯಾಂಕುಗಳು ಒದಗಿಸಬೇಕಾಗುತ್ತದೆ. ಇದರಿಂದಾಗಿ ಬ್ಯಾಂಕುಗಳ ಸಾಲ ನೀಡಿಕೆ ಸಾಮರ್ಥ್ಯ ಕುಂಠಿತವಾಗುತ್ತದೆ ಎಂದು ಖಾಸಗಿ ವಲಯದ ಬ್ಯಾಂಕರ್‌ಗಳು ಅಭಿಪ್ರಾಯಪಟ್ಟಿದ್ದಾರೆ. ಕೇರ್ ರೇಟಿಂಗ್ಸ್ ಸಂಸ್ಥೆಯ ಪ್ರಕಾರ ಪ್ರಸಕ್ತ 2023-24ನೇ ಸಾಲಿನಲ್ಲಿ ವಿವಿಧ ಬಗೆಯ ವೈಯಕ್ತಿಕ ಸಾಲಗಳಿಗೆ ಹೆಚ್ಚಿನ ಬೇಡಿಕೆ ಇರಲಿದೆ. ಎ.21, 2023ರ ಹೊತ್ತಿಗೆ ಒಟ್ಟು ವೈಯಕ್ತಿಕ ಸಾಲದಲ್ಲಿ ಅಭದ್ರ ಸಾಲಗಳ ಪಾಲು ಶೇ.32.9ಕ್ಕೆ ಹೆಚ್ಚಳವಾಗಿದೆ. ಕಳೆದ ವರ್ಷ ಶೇ.31.4ರಷ್ಟಿತ್ತೆಂದು ತಿಳಿದುಬಂದಿದೆ. ಗೃಹ ಸಾಲ ಬಿಟ್ಟರೆ ವೈಯಕ್ತಿಕ ಸಾಲ ವಿಭಾಗದಲ್ಲಿ ಅತಿ ಹೆಚ್ಚು ಅಭದ್ರ ಸಾಲಗಳಿವೆ.

# ಲೋನ್ ಆ್ಯಪ್‌ಗಳ ಮೂಲಕ ಸಾಲ ಪಡೆದರೆ ಬ್ಲ್ಯಾಕ್‌ಮೇಲ್ ಸುಳಿಗೆ ಸಿಲುಕುವಿರಿ

ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಹಣಕಾಸು ವ್ಯವಹಾರದ ಜಾಲಕ್ಕೆ ಸಿಲುಕಿ ಮಾನದ ಜತೆ ಪ್ರಾಣವನ್ನು ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚುತ್ತಿದೆ. ಈ ಅಪರಾಧದಲ್ಲಿ ಆನ್‌ಲೈನ್ ಲೋನ್ ಆ್ಯಪ್‌ಗಳದ್ದೇ ಪಾರುಪತ್ಯ ಕಂಡುಬರುತ್ತಿದ್ದು, ನಿತ್ಯ ನೂರಾರು ಪ್ರಕರಣಗಳು ಸೈಬರ್ ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿವೆ. ಸಾವಿರಾರು ಮಂದಿ ತಮ್ಮ ಆಧಾರ್, ಪಾನ್ ಹಾಗೂ ಬ್ಯಾಂಕ್ ಖಾತೆ ಸಂಖ್ಯೆಯ ವಿವರ ನೀಡಿ ಆನ್‌ಲೈನ್ ಆ್ಯಪ್‌ಗಳ ಮೂಲಕ ಸಾಲ ಪಡೆಯುತ್ತಿದ್ದಾರೆ. ಅಲ್ಲದೆ, ತಮ್ಮ ಮೊಬೈಲ್‌ನಲ್ಲೇ ನೋಂದಣಿ ಪ್ರಕ್ರಿಯೆ ಮಾಡುತ್ತಿದ್ದಾರೆ. ಬಳಿಕ ಲೋನ್ ಆ್ಯಪ್ ಕಂಪೆನಿಯವರು ಸಾಲಗಾರರ ಭಾವಚಿತ್ರವನ್ನು ಮಾರ್ಫಿಂಗ್ ಮಾಡಿ ಬ್ಲ್ಯಾಕ್‌ಮೇಲ್‌ಗೆ ಒಳಪಡಿಸಿ ಸುಲಿಗೆ ಮಾಡುತ್ತಿದ್ದಾರೆ. ರಾಜಧಾನಿಯಲ್ಲಿ 2023ರಲ್ಲಿ ಲೋನ್ ಆ್ಯಪ್ ಕಂಪೆನಿಗಳ ಕಿರುಕುಳದ ಸಂಬಂಧ 900 ಪ್ರಕರಣಗಳು ದಾಖಲಾಗಿವೆ. ಅಲ್ಲದೆ, ಒಂದೇ ಪ್ರಕರಣದಲ್ಲಿ 15 ಲೋನ್ ಆ್ಯಪ್‌ಗಳ ವಿರುದ್ಧ ಬೆಂಗಳೂರು ಪೂರ್ವ ವಿಭಾಗದ ಸೈಬರ್ ಪೊಲೀಸರು ದೂರು ದಾಖಲಿಸಿದ್ದಾರೆ.




**ಉದ್ಯಮಿ ದೂರು :** 43 ವರ್ಷದ ಉದ್ಯಮಿಯೊಬ್ಬರು ವಿವಿಧ 15 ಆನ್‌ಲೈನ್ ಆ್ಯಪ್‌ಗಳ ಮೂಲಕ ಮೇ 2ರಂದು 1.50 ಲಕ್ಷ ರೂ. ಸಾಲ ಪಡೆದಿದ್ದರು. ಬಳಿಕ ಸಾಲವನ್ನು ಬಡ್ಡಿ ಸಮೇತ ಯುಪಿಐ ಮೂಲಕ 2.60 ಲಕ್ಷ ರೂ. ಮರು ಪಾವತಿಸಿದ್ದರು. ಆದರೂ, ವಂಚಕರು ಉದ್ಯಮಿಯ ಆಧಾರ್, ಪಾನ್‌ಕಾರ್ಡ್ ಮಾಹಿತಿ ಆಧರಿಸಿ ವೈಯಕ್ತಿಕ ಮಾಹಿತಿ ಕದ್ದಿದ್ದಾರೆ. ಅಲ್ಲದೆ, ಅವರ ಮೊಬೈಲ್ ಹ್ಯಾಕ್ ಮಾಡಿ ಎಲ್ಲ ಫೋಟೋಗಳನ್ನು ಕಳವು ಮಾಡಿದ್ದಾರೆ.

ಆ ಫೋಟೋಗಳನ್ನು ಮಾರ್ಫಿಂಗ್ ಮಾಡಿ ಉದ್ಯಮಿಯ ವಾಟ್ಸ್ಆ್ಯಪ್‌ಗೆ ಕಳುಹಿಸಿದ್ದರು. ಜತೆಗೆ, 8 ಮೊಬೈಲ್ ಸಂಖ್ಯೆಗಳಿಂದ ಉದ್ಯಮಿಯ ಕುಟುಂಬ ಸದಸ್ಯರು, ಸ್ನೇಹಿತರಿಗೂ ಆ ಅಶ್ಲೀಲ ವಿಡಿಯೊ ಕಳುಹಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಗತಿಯನ್ನು ಸಂಬಂಧಿಕರೊಬ್ಬರು ಉದ್ಯಮಿಗೆ ತಿಳಿಸಿದ್ದರು. ಬಳಿಕ ಉದ್ಯಮಿಯು ಸೈಬರ್ ಪೊಲೀಸರಿಗೆ ದೂರು ಕೊಟ್ಟಿದ್ದರು.

**ಸಮಸ್ಯೆಗೆ ಆಹ್ವಾನ :** ರಾಜ್ಯದಲ್ಲಿ ಬಹಳಷ್ಟು ನಕಲಿ ಲೋನ್ ಆ್ಯಪ್‌ಗಳು ತಲೆ ಎತ್ತಿವೆ. ಸೈಬರ್ ವಂಚಕರು ಆಟೋ ಚಾಲಕರು, ಕಾರ್ಮಿಕರು, ಸ್ಥಳೀಯರಿಗೆ ಹಣದ ಆಮಿಷವೊಡ್ಡಿ ಆಧಾರ್, ಪಾನ್‌ಕಾರ್ಡ್, ಬ್ಯಾಂಕ್‌ಖಾತೆ ದಾಖಲೆಗಳನ್ನು ಪಡೆದು ಚೈನ್‌ಲಿಂಕ್ ಬಿಸ್ನೆಸ್ ಹಾಗೂ ಆನ್‌ಲೈನ್ ಲೋನ್ ಆ್ಯಪ್‌ಗಳನ್ನು ಸೃಷ್ಟಿಸುತ್ತಿದ್ದಾರೆ. ಈ ಆ್ಯಪ್‌ಗಳ ಮೂಲಕ ಸಾಲ ಪಡೆಯುವುದು ಸಮಸ್ಯೆಗೆ ಆಹ್ವಾನ ನೀಡಿದಂತೆ. ಲೋನ್ ಆ್ಯಪ್ ಕಂಪೆನಿಗಳ ವಂಚನೆ ಮತ್ತು ಕಿರುಕುಳ ಸಂಬಂಧ ಸಾಕಷ್ಟು ಮಂದಿ ದೂರು ಕೊಡುತ್ತಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಸಹ ಮಾಡುತ್ತಿದ್ದೇವೆ. ಆದರೆ, ಬಹುತೇಕ ವಂಚಕರು ಹೊರ ರಾಜ್ಯ ಮತ್ತು ಹೊರ ದೇಶಗಳಲ್ಲಿರುವುದರಿಂದ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಾಗುತ್ತಿಲ್ಲ ಎಂದು ಸೈಬರ್ ಪೊಲೀಸರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.




## ಜೂನ್‌ನಲ್ಲಿ ಏರಿದ ಹಣದುಬ್ಬರ : ಧಾನ್ಯಗಳ ಬೆಲೆಯಲ್ಲಿ ಹೆಚ್ಚಳ ಕಾರಣ ರೆಪೊ ದರ ಮತ್ತೆ ಯಥಾಸ್ಥಿತಿ ಸಾಧ್ಯತೆ

**ನವದೆಹಲಿ :** ಜೂನ್ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ.4.81ಕ್ಕೆ ಹೆಚ್ಚಳವಾಗಿದೆ. ಇದು ಮೂರು ತಿಂಗಳ ಗರಿಷ್ಠಮಟ್ಟ. ಆದರೆ ಇದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಗರಿಷ್ಠ ಪ್ರಮಾಣಕ್ಕಿಂತ ಕಡಿಮೆ. ಧಾನ್ಯಗಳ ಬೆಲೆ ಏರಿಕೆಯು ಹಣದುಬ್ಬರ ಹೆಚ್ಚಳಕ್ಕೆ ಪ್ರಮುಖ ಕಾರಣವಾಗಿದೆ.



ಫೆಬ್ರವರಿಯ ನಂತರದಲ್ಲಿ ಚಿಲ್ಲರೆ ಹಣದುಬ್ಬರ ದರವು ಇಳಿಕೆ ಕಾಣುತ್ತಿತ್ತು. ಮುಂದಿನ ತಿಂಗಳ ಮೊದಲ ವಾರದಲ್ಲಿ ಆರ್‌ಬಿಐ ತನ್ನ ಹಣಕಾಸು ನೀತಿಯನ್ನು ಪ್ರಕಟಿಸಲಿದೆ. ಆಗ ಅದು ರೆಪೊ ದರದಲ್ಲಿ ಬದಲಾವಣೆ ತರಬೇಕೇ ಎಂಬುದನ್ನು ನಿರ್ಧರಿಸುವಾಗ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಪರಿಗಣನೆಗೆ ತೆಗೆದುಕೊಳ್ಳಲಿದೆ. ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ.4.31 ಆಗಿತ್ತು. ಹಿಂದಿನ ವರ್ಷದ ಜೂನ್‌ನಲ್ಲಿ ಇದು ಶೇ.7ರಷ್ಟು ಇತ್ತು. ಜೂನ್‌ನಲ್ಲಿ ಆಹಾರ ವಸ್ತುಗಳ ಹಣದುಬ್ಬರವು ಹೆಚ್ಚಾಗಿದೆ. ಗ್ರಾಹಕರ ಬೆಲೆ ಸೂಚ್ಯಂಕದಲ್ಲಿ ಆಹಾರ ವಸ್ತುಗಳಿಗೆ ಹೆಚ್ಚಿನ ಪ್ರಾಧಾನ್ಯ ಇದೆ.

ಈಗ ತರಕಾರಿಗಳ ಬೆಲೆ ಹೆಚ್ಚಳವಾಗಿರುವ ಕಾರಣ ಜುಲೈ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರವು ಶೇ.5.3 ಅಥವಾ ಶೇ.5.5ರ ಮಟ್ಟಕ್ಕೆ ತಲುಪಲಿದೆ. ಇದು ಆರ್‌ಬಿಐ ನಿರೀಕ್ಷೆಯ ಮಟ್ಟವಾದ ಶೇ.5.2ಕ್ಕಿಂತ ಹೆಚ್ಚು. ಹೀಗಾಗಿ, ಆಗಸ್ಟ್‌ನಲ್ಲಿ ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಸಾಧ್ಯತೆ ಇದೆ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**ಇತ್ತೀಚೆಗೆ ಭಾರತೀಯ ರಿಜರ್ವ್ ಬ್ಯಾಂಕು ಸುಸ್ತಿ ಸಾಲಗಳ ರಾಜಿ ಪರಿಹಾರ (Compromise Settlement) ಬಗ್ಗೆ ಸುತ್ತೋಲೆ ಹೊರಡಿಸಿದೆ. ಈ ಬಗ್ಗೆ ನಮಗೆ ವಿವರವಾಗಿ ತಿಳಿಸಿ.**

– ಹರಿಹರೇಶ್ವರ ಸಹಕಾರ ಬ್ಯಾಂಕ್ ಲಿ., ಹರಿಹರ.

– ಶಿಂಷಾ ಸಹಕಾರ ಬ್ಯಾಂಕ್ ಲಿ., ಮದ್ದೂರು

**ಉತ್ತರ :** ಸುಸ್ತಿ ಸಾಲಗಳ ರಾಜಿ ಪರಿಹಾರದ ಬಗ್ಗೆ ಪ್ರಶ್ನೆ ಮತ್ತು ಉತ್ತರಗಳ ರೂಪದಲ್ಲಿ ಈ ಕೆಳಗಿನಂತೆ ಸರಳವಾಗಿ ವಿವರಿಸಲಾಗಿದೆ.

**01. ಸುಸ್ತಿಸಾಲಗಳ ರಾಜಿ ಪರಿಹಾರ ಅಥವಾ ಒನ್‌ಟೈಮ್ ಸೆಟ್ಲಮೆಂಟ್ ಸ್ಕೀಮ್ (ಒ.ಟಿ.ಎಸ್) ಅಂದರೇನು?**

**ಉತ್ತರ :** ಸುಸ್ತಿಸಾಲವನ್ನು ಮರುಪಾವತಿ ಮಾಡುವ ಉದ್ದೇಶವಿದ್ದರೂ, ಮರುಪಾವತಿ ಮಾಡಲು ಸಾಕಷ್ಟು ಮಾರ್ಗಗಳಿಲ್ಲದೆ ಕಷ್ಟದಲ್ಲಿರುವ ಸಾಲಗಾರರಿಗೆ ತಮ್ಮ ಹೊಣೆಯಿಂದ ಮುಕ್ತವಾಗಲು ಒ.ಟಿ.ಎಸ್ ಒಂದು ಅವಕಾಶವೆಂದು ತಿಳಿಯಬಹುದು. ಸತತ ಪ್ರಯತ್ನದ ನಂತರವೂ ಬ್ಯಾಂಕು ಸುಸ್ತಿ ಸಾಲ ವಸುಲಾತಿಯಲ್ಲಿ ಯಶಸ್ಸು ಪಡೆಯದಿದ್ದಾಗ, ಸುಸ್ತಿಸಾಲವನ್ನು ಕಡಿಮೆಗೊಳಿಸಲು ಇದೊಂದು ಅವಕಾಶವೆಂದು ಕೂಡಾ ಪರಿಗಣಿಸಬಹುದು.

**02. ಒ.ಟಿ.ಎಸ್ ಅನ್ನು ಜಾರಿಗೊಳಿಸುವ ಮುನ್ನ ಬ್ಯಾಂಕು ಮಾಡಬೇಕಾದ ಪೂರ್ವಭಾವಿ ಕ್ರಮಗಳೇನು?**

**ಉತ್ತರ :** ಸತತ ಪ್ರಯತ್ನಗಳ ನಂತರವೂ ವಸೂಲಾಗದೇ ಇರುವ ಸಾಲಗಳಿದ್ದು, ಒ.ಟಿ.ಎಸ್ ನೀಡುವುದರಿಂದ ವಸೂಲಾಗುವ ಸಾಧ್ಯತೆಗಳಿರುವುದನ್ನು ಖಾತರಿ ಪಡಿಸಿಕೊಂಡ ನಂತರವೇ ಬ್ಯಾಂಕು ಒ.ಟಿ.ಎಸ್. ಜಾರಿಗೊಳಿಸಲು ಮುಂದಾಗಬೇಕು. ಯೋಜನೆ ಜಾರಿಗೊಳಿಸುವ ಮೊದಲು ಸುಸ್ತಿಸಾಲಗಳ ರಾಜಿ ಪರಿಹಾರ ನೀತಿ ಮತ್ತು ಸಿಬ್ಬಂದಿ ಹೊಣೆಗಾರಿಕೆಯ ಪರೀಕ್ಷೆಗಳ ನೀತಿಯನ್ನು ರೂಪಿಸಬೇಕು. ಒ.ಟಿ.ಎಸ್‌ನ್ನು ಜಾರಿಗೊಳಿಸಬಯಸುವ ಬ್ಯಾಂಕುಗಳು ಮಹಾಮಂಡಳದಿಂದ ಈ ಮಾದರಿ ನೀತಿಗಳನ್ನು ಪಡೆಯಬಹುದು. ನಿರ್ದಿಷ್ಟ ಸಾಲಗಾರನಿಗೆ ಒ.ಟಿ.ಎಸ್ ಮಂಜೂರು ಮಾಡುವ ಮುನ್ನ ಸಿಬ್ಬಂದಿ ಹೊಣೆಗಾರಿಕೆಯನ್ನು ಪರೀಕ್ಷಿಸುವುದು ಕಡ್ಡಾಯ. ಸಾಲ ಸುಸ್ತಿಯಾಗಲು ಸಿಬ್ಬಂದಿಗಳ ಕರ್ತವ್ಯಲೋಪ ಕಾರಣವಾಗಿದೆಯೇ ಎಂದು ತಿಳಿಯುವುದು ಈ ಪರೀಕ್ಷೆಯ ಉದ್ದೇಶವೇ ಹೊರತು ಸಿಬ್ಬಂದಿಗೆ ದಂಡ ವಿಧಿಸುವುದು ಅಲ್ಲ. ಕರ್ತವ್ಯಲೋಪ ಕಂಡು ಬಂದ ಸಂದರ್ಭಗಳಲ್ಲಿ ಮಾತ್ರ ಸೂಕ್ತ ವಿಚಾರಣೆ ನಂತರ ದಂಡವಿಧಿಸುವ ಕ್ರಮವಿರಬೇಕು.

**03. ಒ.ಟಿ.ಎಸ್. ಜಾರಿಗೊಳಿಸುವ ಮುನ್ನ ರಿಜಿಸ್ಟ್ರಾರರ ಪೂರ್ವಾನುಮತಿ ಬೇಕೆ?**

**ಉತ್ತರ :** ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ 2020ರಲ್ಲಿ ಆದ ತಿದ್ದುಪಡಿಯ ನಂತರ ಸಾಲ ವಸೂಲಾತಿ ಬಗ್ಗೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ನಿರ್ದೇಶನ ನೀಡಲು ಭಾರತೀಯ ರಿಜರ್ವ್ ಬ್ಯಾಂಕು ಪೂರ್ಣ ಅಧಿಕಾರ ಪಡೆದಿದೆ. ಅದಲ್ಲದೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ನಿಯಮ 27 (1) (ಎನ್–6)ರ ಪ್ರಾವಧಾನದಂತೆ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಪಟ್ಟಣ ಸಹಕಾರ ಬ್ಯಾಂಕುಗಳು ವಸೂಲಾಗದ ಸಾಲಗಳ ವಸೂಲಾತಿಗಾಗಿ ಕ್ರಮಕೈಗೊಳ್ಳಬಹುದು. ಆದ್ದರಿಂದ, ಒ.ಟಿ.ಎಸ್ ನೀಡುವ ಮುನ್ನ ರಿಜಿಸ್ಟ್ರಾರರ ಪೂರ್ವಾನುಮತಿಯ ಅಗತ್ಯವಿಲ್ಲ.

**04. ಸುಸ್ತಿ ಸಾಲಗಳ ಒ.ಟಿ.ಎಸ್ ಜಾರಿಗೊಳಿಸುವ ಮುನ್ನ ಸಾಮಾನ್ಯ ಸಭೆಯ ಒಪ್ಪಿಗೆ ಬೇಕಿದೆಯೇ?**

**ಉತ್ತರ :** ಸುಸ್ತಿಸಾಲಗಳ ತಾಂತ್ರಿಕ ವಜಾ (Technical Write-off) ಮತ್ತು ಒ.ಟಿ.ಎಸ್ ಮಾಡಲು ಆಡಳಿತ ಮಂಡಳಿ ಪೂರ್ಣ ಅಧಿಕಾರ ಹೊಂದಿದೆ. ಇದಕ್ಕೆ ಮಹಾಮಂಡಳದ ಅನುಮತಿ ಬೇಕಿಲ್ಲ.

**05. ವಂಚನೆ ಅಥವಾ ಉದ್ದೇಶಪೂರ್ವಕ ಡೀಫಾಲ್ಟ್ ಆದಂತಹ ಸಾಲಗಳಿಗೂ ಒ.ಟಿ.ಎಸ್ ನೀಡಬಹುದೇ?**

**ಉತ್ತರ :** ಅಂತಹ ಸಾಲಗಾರರ ವಿರುದ್ಧ ನಡೆಯುತ್ತಿರುವ ಕ್ರಿಮಿನಲ್ ಮೊಕದ್ದಮೆಗಳಿಗೆ ಯಾವುದೇ ಬಾಧೆ ಇಲ್ಲದಂತೆ ನೋಡಿಕೊಂಡಲ್ಲಿ ಒ.ಟಿ.ಎಸ್ ನೀಡಬಹುದು.

**06. ಒ.ಟಿ.ಎಸ್ ಯಾರು ಮಂಜೂರು ಮಾಡಬೇಕು.?**

**ಉತ್ತರ :** ಸಾಲ ಮಂಜೂರು ಮಾಡಿದ ಅಧಿಕಾರಿಗಿಂತ ಮೇಲಿನ ಹುದ್ದೆಯಲ್ಲಿರುವವರು ಒ.ಟಿ.ಎಸ್ ಮಂಜೂರು ಮಾಡಬೇಕು. ಆಡಳಿತ ಮಂಡಳಿ ಒ.ಟಿ.ಎಸ್ ಮಂಜೂರು ಮಾಡುವುದು ಒಳಿತು.

**07. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರಿಗೆ ಒ.ಟಿ.ಎಸ್ ನೀಡಬಹುದೇ?**

**ಉತ್ತರ :** ನಿರ್ದೇಶಕರು ಮತ್ತು ಅವರ ಸಂಬಂಧಿಕರ ಹಿಂದಿನ ಸಾಲ ಬಾಕಿ ಇದ್ದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿ ಪಡೆದು ಒ.ಟಿ.ಎಸ್ ನೀಡಬಹುದು.

**08. ಒ.ಟಿ.ಎಸ್ ನೀಡಿದ ವ್ಯಕ್ತಿಗೆ ಹೊಸ ಸಾಲ ನೀಡಬಹುದೇ?**

**ಉತ್ತರ :** ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯ ಪ್ರಕಾರ ಬ್ಯಾಂಕಿಗೆ ವಂಚನೆ ಮಾಡಿದ ಪ್ರಕರಣ ಮತ್ತು ಇತರ ಸಾಲಗಾರರಿಗೆ ಅನುಕ್ರಮವಾಗಿ ಕನಿಷ್ಠ ಐದು ವರ್ಷ ಮತ್ತು ಒಂದು ವರ್ಷದ ಬಳಿಕ ಹೊಸ ಸಾಲ ನೀಡಬಹುದು. ಬ್ಯಾಂಕು ಈ ಅವಧಿಯನ್ನು ಹೆಚ್ಚಿಸಬಹುದು ಅಥವಾ ವಂಚನೆ ಮಾಡಿದ ಸದಸ್ಯರಿಗೆ ಹೊಸ ಸಾಲ ನಿರಾಕರಿಸಬಹುದು.

**09. ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿರುವಾಗ ಒ.ಟಿ.ಎಸ್ ನೀಡಬಹುದೇ?**

**ಉತ್ತರ :** ನ್ಯಾಯಾಲಯದ ಅನುಮತಿ ಪಡೆದು ಒ.ಟಿ.ಎಸ್ ನೀಡಬಹುದು.

**10. ಒ.ಟಿ.ಎಸ್ ಮಾಡುವ ವೇಳೆ ಬ್ಯಾಂಕು ಅಸಲು ಮತ್ತು / ಅಥವಾ ಬಡ್ಡಿ ತ್ಯಾಗ ಮಾಡಬಹುದಾದ ಗರಿಷ್ಠ ಮಿತಿ ಏನು?**

**ಉತ್ತರ :** ಈ ಬಗ್ಗೆ ರಿಜರ್ವ್ ಬ್ಯಾಂಕು ಯಾವುದೇ ಮಿತಿ ಸೂಚಿಸಿಲ್ಲ. ವಾಣಿಜ್ಯ ಬ್ಯಾಂಕುಗಳಲ್ಲಿ ಅಸಲನ್ನು ಕೂಡಾ ತ್ಯಾಗ ಮಾಡುವ ಸಂದರ್ಭವಿದೆ. ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲಕ್ಕೆ ಭದ್ರತೆಯಾಗಿ ಸ್ಥಿರಾಸ್ತಿ ನೀಡಿರುವ ಪ್ರಕರಣಗಳು ಕಡಿಮೆ. ಅಲ್ಲದೆ, ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ವಸೂಲಾತಿಗೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿರುವಂತೆ ವಿಶೇಷ ನ್ಯಾಯಾಲಯದ ವ್ಯವಸ್ಥೆ ಇಲ್ಲ. ಪಟ್ಟಣ ಸಹಕಾರ ಬ್ಯಾಂಕುಗಳ ನಷ್ಟ ಭರಿಸುವ ಶಕ್ತಿ ತುಂಬ ಕಡಿಮೆ. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು ಪಟ್ಟಣ ಸಹಕಾರ ಬ್ಯಾಂಕುಗಳು ಪೂರ್ಣ ಅಸಲನ್ನು ಮತ್ತು ಸಾಧ್ಯವಾದಷ್ಟು ಸಾಮಾನ್ಯ ಬಡ್ಡಿಯನ್ನು ಪಡೆಯುವುದು ಉಚಿತ.

**11. ಒ.ಟಿ.ಎಸ್‌ಗೆ ಅರ್ಜಿ ಸಲ್ಲಿಸುವಾಗ ಸಾಲಗಾರ ನೀಡಬೇಕಾದ ಮುಂಗಡ ಹಣವೆಷ್ಟು?**

**ಉತ್ತರ :** ರಿಜರ್ವ್ ಬ್ಯಾಂಕು ಯಾವುದೇ ಮುಂಗಡ ಹಣದ ಬಗ್ಗೆ ಹೇಳದಿದ್ದರೂ, ಸಾಲಗಾರನ ಒ.ಟಿ.ಎಸ್ ಬಗ್ಗೆ ಇರುವ ಪ್ರತಿಬದ್ಧತೆಯನ್ನು ಸೂಚಿಸಲು ಒ.ಟಿ.ಎಸ್ ಮೊತ್ತದ ಕನಿಷ್ಠ 25%ನ್ನು ಮುಂಗಡವಾಗಿ ಪಡೆಯುವುದು ಉಚಿತ. ಉಳಿದ ಮೊತ್ತವನ್ನು ಒಪ್ಪಂದವಾದ ಮೂರು ತಿಂಗಳೊಳಗೆ ಪಾವತಿಸಬೇಕು. ಇದಕ್ಕೆ ತಪ್ಪಿದಲ್ಲಿ ಹಿಂದಿನ ಒಪ್ಪಂದದಂತೆ ವಸೂಲಾತಿ ಕ್ರಮ ಮುಂದುವರೆಯುವುದು.

**12. ಸಾಲಗಾರ ಒ.ಟಿ.ಎಸ್ ನೀಡಬೇಕೆಂದು ಹಕ್ಕೊತ್ತಾಯ ಮಂಡಿಸಬಹುದೇ?**

**ಉತ್ತರ :** ಯಾವುದೇ ಸಾಲಗಾರ ಒ.ಟಿ.ಎಸ್ ಗಾಗಿ ಹಕ್ಕೊತ್ತಾಯ ಮಂಡಿಸುವಂತಿಲ್ಲ. ಯಾವುದೇ ನ್ಯಾಯಾಲಯ ಕೂಡಾ ಬ್ಯಾಂಕಿಗೆ ಈ ಬಗ್ಗೆ ಆದೇಶ ನೀಡುವಂತಿಲ್ಲ.

**13. ಒ.ಟಿ.ಎಸ್ ಯೋಜನೆ ವರ್ಷದ 12 ತಿಂಗಳೂ ತೆರೆದಿರುತ್ತದೆಯೇ? ಸಾಲಗಾರ ತನಗೆ ಬೇಕೆಂದಾಗ ಒ.ಟಿ.ಎಸ್‌ಗೆ ಅರ್ಜಿ ಸಲ್ಲಿಸಬಹುದೇ?**

**ಉತ್ತರ :** ಸಾಮಾನ್ಯವಾಗಿ ಬ್ಯಾಂಕಿನ ಒ.ಟಿ.ಎಸ್ ಯೋಜನೆ ಖಾಯಂ ಆಗಿ ತೆರೆದಿರುವುದಿಲ್ಲ. ಒ.ಟಿ.ಎಸ್ ಯೋಜನೆ ತರಬೇಕಾದ ಅವಶ್ಯಕತೆಯನ್ನು ನಿರ್ಧರಿಸುವ ಕಾರ್ಯ ಆಡಳಿತ ಮಂಡಳಿಗೆ ಸೇರಿದ ವಿಷಯ. ಯೋಜನೆ ಪ್ರಾರಂಭಿಸಿದ ನಂತರ ನಿರ್ದಿಷ್ಟ ಅವಧಿಯವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ತೀರ ಅವಶ್ಯಕತೆ ಇದ್ದಲ್ಲಿ ಮಾತ್ರ ಒ.ಟಿ.ಎಸ್‌ನ್ನು ಸಾಲ ವಸೂಲಾತಿ ಕ್ರಮವಾಗಿ ಬಳಸಬೇಕು. ಇದರ ದುರ್ಬಳಕೆಯಿಂದ ಮುಂದೆ ತೊಂದರೆಯಾಗಬಹುದು.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಪಶುವೈದ್ಯ ಡಾ. ವಸೀಂ ಮಿರ್ಜಾ ಅವರಿಗೆ ಕೇಂದ್ರ ಸರ್ಕಾರದ ಪ್ರತಿಷ್ಠಿತ ಗಜ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಆಗಸ್ಟ್ 12 ರಂದು ವಿಶ್ವ ಆನೆ ದಿನದಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಮಿರ್ಜಾ ಅವರಿಗೆ ಗಜ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕರ್ನಾಟಕದ ಅಧಿಕಾರಿಯೊಬ್ಬರು ಇಂತಹ ಪ್ರಶಸ್ತಿಯನ್ನು ಪಡೆಯುತ್ತಿರುವುದು ಇದೇ ಮೊದಲು.
- ಲಿಂಗತ್ವ ಕಾರಣಕ್ಕೆ ಅಪಹಾಸ್ಯ, ನಿಂದನೆಗೆ ಒಳಗಾಗಿ, ಜೀವನೋಪಾಯಕ್ಕಾಗಿ ಬಾಗಲಕೋಟೆಯ 22 ವರ್ಷದ ತೃತೀಯಲಿಂಗಿ ಸನಮ್ ಹಾಜಿ, ಈಗ ತರಕಾರಿ ಮಾರಾಟದ ಮೂಲಕ ಪ್ರತಿದಿನ ರೂ. 6,000 ಗಳಿಸುತ್ತಿದ್ದು ಸ್ವಾಭಿಮಾನದ ಬದುಕು ಕಟ್ಟಿಕೊಂಡಿದ್ದು, ತನ್ನ ಸಮುದಾಯಕ್ಕೆ ಮಾದರಿಯಾಗಿದ್ದಾರೆ.
- ಕೆಎಸ್‌ಆರ್‌ಟಿಸಿ ದೇಶದಲ್ಲಿಯೇ ಪ್ರಥಮ ಬಾರಿ ಕಾರ್ಮಿಕ ಕಲ್ಯಾಣದ ಯೋಜನೆ ಅಡಿಯಲ್ಲಿ ಸಿಬ್ಬಂದಿಗೆ 1 ಕೋಟಿ ರೂ. ಮೊತ್ತದ ಅಪಘಾತ ವಿಮೆಯನ್ನು ಜಾರಿಗೊಳಿಸಿದೆ. ಇತ್ತೀಚೆಗೆ ಅಪಘಾತದಲ್ಲಿ ಮೃತಪಟ್ಟ ಸಂಸ್ಥೆಯ ಚಾಲಕ–ಕಮ್ ಕಂಡಕ್ಟರ್‌ಗಳ ಕುಟುಂಬಗಳಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಲಾ 1 ಕೋಟಿ ರೂ.ಗಳ ಅಪಘಾತ ಪರಿಹಾರದ ಚೆಕ್ ವಿತರಿಸಿದ್ದಾರೆ.
- ಅರಸೀಕೆರೆ ತಾಲೂಕಿನ ಬಾಗಿವಾಳು ಗ್ರಾಮದ ರೈತ ವೇಣುಗೋಪಾಲ್ ಎಂಬುವರು ಗಾಯಗೊಂಡಿದ್ದ ಚಿರತೆ ಮರಿಯೊಂದಿಗೆ ಕಾದಾಡಿ ಅದನ್ನು ಹಿಡಿದು ತನ್ನ ದ್ವಿಚಕ್ರವಾಹನಕ್ಕೆ ಕಟ್ಟಿ ಗ್ರಾಮಕ್ಕೆ ತಂದಿದ್ದಾರೆ. ಮಾಹಿತಿ ಮೇರೆಗೆ ಸ್ಥಳಕ್ಕೆ ಆಗಮಿಸಿದ್ದ ಅರಣ್ಯಾಧಿಕಾರಿಗಳು ಚಿರತೆಯನ್ನು ಚಿಕಿತ್ಸೆಗಾಗಿ ಪಶು ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ.
- ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಜಿಎಸ್‌ಎಲ್ವಿ ಮಾರ್ಕ್ 3 (LVM3) ಹೆವಿ–ಲಿಫ್ಟ್ ಉಡಾವಣಾ ವಾಹನದಲ್ಲಿ ಚಂದ್ರಯಾನ–3ನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. ನೌಕೆ ಆಗಸ್ಟ್ 23 ರಂದು ಚಂದ್ರನ ಅಂಗಳದಲ್ಲಿ ಇಳಿಯಲಿದೆ.
- ಮಧ್ಯಪ್ರದೇಶದ ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ನಮೀಬಿಯಾದಿಂದ ತರಲಾಗಿದ್ದ ಮತ್ತೊಂದು ಚೀತಾ ಮೃತಪಟ್ಟಿದ್ದು, ಕಳೆದ ನಾಲ್ಕು ತಿಂಗಳ ಅವಧಿಯಲ್ಲಿ ಎಂಟು ಚೀತಾಗಳು ಸಾವನ್ನಪ್ಪಿವೆ. ಕಳೆದ ಸೆಪ್ಟೆಂಬರ್‌ನಲ್ಲಿ ಕುನೋ ರಾಷ್ಟ್ರೀಯ ಉದ್ಯಾನವನಕ್ಕೆ ಬಿಡುಗಡೆ ಮಾಡಿದ ನಂತರ ಮೃತಪಟ್ಟ ಎಂಟನೇ ಚೀತಾ ಇದಾಗಿದೆ.

## ಓದುಗರ ಅನಿಸಿಕೆ...




**ಎಷ್ಟು ಅಭಿನಂಧಿಸಿದರೂ ಸಾಲದು :** ರಾಜ್ಯ ಸರ್ಕಾರ ಐದು ಖಾತರಿಗಳ ಮೂಲಕ ರಾಜ್ಯದ ಆರ್ಥಿಕ ದುರ್ಬಲ ಕುಟುಂಬಗಳಿಗೆ ತಿಂಗಳಿಗೆ ಸರಾಸರಿ ನಾಲ್ಕು ಸಾವಿರದಿಂದ ಐದು ಸಾವಿರ ರೂಪಾಯಿಗಳ ಹೆಚ್ಚುವರಿ ಆರ್ಥಿಕ ನೆರವನ್ನು ನೀಡುತ್ತಿರುವುದು ಸಾರ್ವತ್ರಿಕ ಮೂಲ ಆದಾಯ ಎಂಬ ಪರಿಕಲ್ಪನೆಯಾಗಿದೆ. ಇದನ್ನು ದೇಶದಲ್ಲಿಯೇ ಪ್ರಥಮ ಬಾರಿಗೆ ಅನುಷ್ಠಾನಗೊಳಿಸಿ ಕರ್ನಾಟಕ ಮಾದರಿ ಆಡಳಿತ ತೋರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎಷ್ಟು ಅಭಿನಂಧಿಸಿದರೂ ಸಾಲದು.

**▸▸ ವಿನಯಾ ಅನಂತ್, ಬೆಂಗಳೂರು**

**ಗ್ರಾಹಕರು ಬಿಸಿ ಅನುಭವಿಸುತ್ತಿದ್ದಾರೆ :** ಪ್ರಸಕ್ತ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣ ವಲಯದಲ್ಲಿ ದೊಡ್ಡಮಟ್ಟದ ಚೇತರಿಕೆ ಕಂಡು ಬಂದಿರುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ. ಇದರಿಂದಾಗಿ ಗೃಹಗಳ ಸಾಲದ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡಿದೆ. ಗೃಹ ಮಾರಾಟದ ಹೆಚ್ಚಳದಿಂದ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಮತ್ತಷ್ಟು ಬಲ ಸಿಕ್ಕಿರುವುದು ನಿಜವಾದರೂ, ಗ್ರಾಹಕರು ಬಡ್ಡಿ ದರದ ಹೆಚ್ಚಳದ ಬಿಸಿ ಅನುಭವಿಸುತ್ತಿದ್ದಾರೆ.

**▸▸ ಶಿವರುದ್ರಪ್ಪ ಎಂ., ತುಮಕೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.